# ಕೃಷಿಯಲ್ಲಿ ಸಾಧನೆ ಡನಾಟಾ ಗುರಿ




ದಕ್ಷಿಣ ಅಮೆರಿಕದ ಗಯಾನದಿಂದ ಬಂದ ಡನಾಟಾ

ಸಾಂಸ್ಕೃತಿಕ ರಾಜಧಾನಿ ಎಂದೇ ಖ್ಯಾತವಾಗಿರುವ ಮೈಸೂರಿನ ಚೆಲುವಿಗೆ ಮನಸೋಲದವರು ಇಲ್ಲ. ಪ್ರವಾಸಿ ತಾಣಗಳು, ಸಾಂಸ್ಕೃತಿಕ ಚಟುವಟಿಕೆಗಳ ಸೊಬಗನ್ನು ಕಣ್ತುಂಬಿಕೊಳ್ಳಲು ದೇಶ ವಿದೇಶಗಳಿಂದ ಪ್ರವಾಸಿಗರು ಇಲ್ಲಿಗೆ ಬರುತ್ತಾರೆ. ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಈ ಊರು ಇಷ್ಟವಾಗುತ್ತದೆ.

ಶತಮಾನದ ಇತಿಹಾಸವಿರುವ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿವಿಧ ದೇಶಗಳ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಸಸ್ಯವಿಜ್ಞಾನ ಸ್ನಾತಕೋತ್ತರ ಅಧ್ಯಯನ ವಿಭಾಗದ ಎರಡನೇ ಸೆಮಿಸ್ಟರ್ ವಿದ್ಯಾರ್ಥಿನಿ ಡನಾಟಾ ಅವರಿಗೆ ಈ ಊರಿನ ಪರಂಪರೆ ಇಷ್ಟವಾಗಿದೆ. ದಕ್ಷಿಣ ಅಮೆರಿಕದ ಗಯಾನದ ಈ ಯುವತಿ ಕಾಮನ್‌ವೆಲ್ತ್ ವಿದ್ಯಾರ್ಥಿವೇತನ ಪಡೆದು ಅಧ್ಯಯನ ಮಾಡುತ್ತಿದ್ದಾರೆ.

ಸಂಗೀತ, ಅಡುಗೆ, ಸುತ್ತಾಟ ಇವೆಲ್ಲವೂ ಡನಾಟಾ ಹವ್ಯಾಸಗಳು. ಪ್ರಾಥಮಿಕ, ಪ್ರೌಢಶಾಲೆ, ಪದವಿ (ಬಿ.ಎಸ್ಸಿ–ಕೃಷಿ) ವ್ಯಾಸಂಗವನ್ನು ಗಯಾನದಲ್ಲಿ ಪೂರೈಸಿದ್ದಾರೆ. ಉನ್ನತ ಶಿಕ್ಷಣದ ಕನಸನ್ನು ಹೊತ್ತು ಭಾರತಕ್ಕೆ ಬಂದಿದ್ದಾರೆ. ವ್ಯಾಸಂಗ ಮುಗಿಸಿ ಸ್ವದೇಶಕ್ಕೆ ತೆರಳಿ ಅಲ್ಲಿನ ಅಕ್ಕಿ ಅಭಿವೃದ್ಧಿ ಸಂಶೋಧನಾ ಮಂಡಳಿಯಲ್ಲಿ ಉದ್ಯೋಗಕ್ಕೆ ಸೇರುವ ಗುರಿ ಇಟ್ಟುಕೊಂಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿಯೇ ಪಿಎಚ್‌.ಡಿ ಅಧ್ಯಯನ ಮಾಡುವ ಆಸೆ ಇದೆ.

ಇನ್ನು ಕೋರ್ಸ್‌ ಮುಗಿಯುವವರೆಗೆ ದೇಶಕ್ಕೆ ಹೋಗುವಂತಿಲ್ಲ. ಹೀಗಾಗಿ, ಮಾಲ್‌ಗಳಲ್ಲಿ ಶಾಪಿಂಗ್, ಸಿನಿಮಾ, ಪ್ರವಾಸಿ ತಾಣ ಸುತ್ತಾಟಕ್ಕೆ ರಜಾದಿನಗಳು ಮೀಸಲು. ಗೆಳೆಯರ ಸ್ನೇಹಪರತೆ, ಜನರ ಒಡನಾಟ ಅವರನ್ನು ಚಕಿತಗೊಳಿಸಿದೆ. ಹಬ್ಬಗಳಂದು ಗೆಳೆಯರ ಮನೆಗೆ ಹೋಗಿ ಸಂಭ್ರಮದಲ್ಲಿ ಪಾಲ್ಗೊಳ್ಳುತ್ತಾರೆ. ‘ಕುಸ್ತಿ’, ‘ಕಬಡ್ಡಿ’ಯಂಥ ಆಟಗಳು ಬಹಳ ಇಷ್ಟವಾಗಿವೆ.

ನಾಡಹಬ್ಬ ದಸರಾ ಮಹೋತ್ಸವ, ವಿಶ್ವವಿಖ್ಯಾತ ಅರಮನೆ, ಚಾಮರಾಜೇಂದ್ರ ಮೃಗಾಲಯ, ಚಾಮುಂಡಿ ಬೆಟ್ಟ, ಕೃಷ್ಣರಾಜಸಾಗರ ಜಲಾಶಯ, ಪಶ್ಚಿಮ ಘಟ್ಟ ಅವರನ್ನು ಪುಳಕಗೊಳಿಸಿದೆ. ಬೆಂಗಳೂರಿನ ಸಂಚಾರ ದಟ್ಟಣೆಯು ಅವರನ್ನು ಬೆಚ್ಚಿಬೀಳಿಸಿದೆ. ಮೈಸೂರಿನ ರಸ್ತೆಗಳ ಬಗ್ಗೆ ಅವರಿಗೆ ಖುಷಿ ಇದೆ. ಇಲ್ಲಿನ ಅಂತರರಾಷ್ಟ್ರೀಯ ವಿದ್ಯಾರ್ಥಿನಿಲಯ, ಆತಿಥ್ಯಗಳನ್ನು ಕೊಂಡಾಡುತ್ತಾರೆ.

ಬೋಧನೆ ವಿಧಾನ, ಹಾಜರಾತಿ ಕಡ್ಡಾಯ ವಿಷಯಗಳ ಬಗ್ಗೆ ಕೊಂಚ ಬೇಸರ ಅವರಿಗಿದೆ. ಬೋಧನೆಗೆ ಬೋರ್ಡ್‌, ಸೀಮೆಸುಣ್ಣ ಬಳಸುವುದು, ತರಗತಿಗಳಿಗೆ ಕಡ್ಡಾಯವಾಗಿ (ಶೇ 75) ಹಾಜರಾಗಬೇಕೆಂಬ ನಿಯಮ ಮಾಡಿರುವುದು ಅವರ ಬೇಸರಕ್ಕೆ ಕಾರಣ. ಶಿಕ್ಷಣ ಗುಣಮಟ್ಟ ಚೆನ್ನಾಗಿದೆ. ಆದರೆ, ಡಿಜಿಟಲ್ ಯುಗಕ್ಕೆ ತಕ್ಕಂತೆ ಕಲಿಕೆ ಮತ್ತು ಬೋಧನಾ ವಿಧಾನಗಳಲ್ಲಿ ಕೆಲ ಬದಲಾವಣೆ ಮಾಡಿಕೊಳ್ಳಬೇಕು ಎಂಬುದು ಅವರ ಸಲಹೆ.

ಆಹಾರ ಪದ್ಧತಿಗೆ ಒಗ್ಗಿಕೊಳ್ಳುವುದು ಅನಿವಾರ್ಯವಾಗಿದೆ. ಆಹಾರದಲ್ಲಿ ಮಸಾಲೆ ಹೆಚ್ಚು ಬಳಕೆ ಅವರಿಗೆ ವರ್ಜ್ಯ. ‘ಮೈಸೂರು ಪಾಕು’, ‘ಜಹಾಂಗೀರ್’, ‘ಪೇಡಾ’ದಂತಹ ಸಿಹಿ ಪದಾರ್ಥಗಳು ಇವರಿಗಿಷ್ಟ.

ನಾಗರಹೊಳೆ, ಬಂಡಿಪುರ ಅರಣ್ಯಗಳಿಗೆ ಭೇಟಿ ನೀಡಿ ಅಲ್ಲಿನ ವನಸಂಪತ್ತಿನ ಬಗ್ಗೆ ತಿಳಿದುಕೊಳ್ಳುವ ಆಸಕ್ತಿ ಇದೆ. ಮೈಸೂರು ಮತ್ತು ಸುತ್ತಲಿನ ಗ್ರಾಮಗಳಿಗೆ ತೆರಳಿ ಕಬ್ಬು, ಭತ್ತ, ಮೆಕ್ಕೆಜೋಳ ಬೆಳೆ ಪದ್ಧತಿ, ವ್ಯವಸಾಯ ಚಟುವಟಿಕೆಗಳನ್ನು ವೀಕ್ಷಿಸುವ ಇಚ್ಛೆ ಅವರಿಗಿದೆ.

‘ನಮ್ಮಲ್ಲಿ ರೈಲು ಸಂಚಾರವೇ ಇಲ್ಲ. ಭಾರತದಲ್ಲಿ ರೈಲಿನಲ್ಲಿ ಮೊದಲ ಬಾರಿ ಸಂಚರಿಸಿದಾಗ ಸಂತೋಷ, ರೋಮಾಂಚನ ಉಂಟಾಯಿತು. ಮೈಸೂರು ಸುಂದರ ನಗರ. ಇಲ್ಲಿ ವ್ಯಾಸಂಗಕ್ಕೆ ಅವಕಾಶ ಸಿಕ್ಕಿದ್ದು ಪುಣ್ಯ’ ಎಂದು ಡನಾಟಾ ಹೇಳುತ್ತಾರೆ.

‘ನಾವು ಮಾಂಸಾಹಾರಿಗಳು. ಇಲ್ಲಿನ ತಿಂಡಿ, ಊಟ ಸ್ವಲ್ಪ ಹಿಡಿಸುತ್ತಿಲ್ಲ. ಹೀಗಾಗಿ, ಸ್ವತಃ ಅಡುಗೆ ಮಾಡುತ್ತೇನೆ. ಅಡುಗೆ ಮಾಡುವುದೆಂದರೆ ಬಹಳ ಇಷ್ಟ. ನಮ್ಮ ರುಚಿಯ ಭಕ್ಷ್ಯಗಳನ್ನು ಮಾಡಿಕೊಳ್ಳುತ್ತೇನೆ. ಸಂಗೀತ ಕೇಳುತ್ತೇನೆ. ಭಾರತದಲ್ಲಿ ನೆಲೆಸಬೇಕೆಂಬ ಉದ್ದೇಶ ಇಲ್ಲ. ವಿದ್ಯಾಭ್ಯಾಸದ ಮುಗಿಸಿ ತಾಯ್ನಾಡಿನಲ್ಲಿ ಕೆಲಸಕ್ಕೆ ಸೇರುತ್ತೇನೆ. ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು’ ಎಂಬ ಮಹದಾಸೆ ಇದೆ.

■ ಧನ್ಯಪ್ರಸಾದ್ ಬಿ.ಜೆ.